ಆ. ಈ ಎರಡೂ ಸ್ಥಳಗಳಲ್ಲಿ ಸೇತುವೆ ನಿರ್ಮಿಸಲು ಪ್ರಸ್ತಾವನೆಯು ಸರ್ಕಾರದಲ್ಲಿ ಸ್ವೀಕೃತವಾಗಿರುತ್ತದೆ. ಈ ಕಾಮಗಾರಿಗಳಿಗೆ ಸಚಿವ ಸಂಪುಟ ಉಪ ಸಮಿತಿಯ ಮತ್ತು ನಬಾರ್ಡ್‌ನ ಅನುಮೋದನೆ ದೊರೆತಲ್ಲಿ ಕಾಮಗಾರಿಗಳನ್ನು ಕೈಗೊಳ್ಳಬಹುದಾಗಿದೆ.

ಸೂಳ್ಯ ತಾಲ್ಲೂಕಿನಲ್ಲಿ ರಸ್ತೆಗಳ ಡಾಂಬರೀಕರಣ

166(647) ಶ್ರೀ ಅಂಗಾರ ಎಸ್ (ಸೂಳ್ಯ) ಮಾನ್ಯಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಜಾಲ್ಸೂರು-ಸುಬ್ರಹ್ಮಣ್ಯ, ಅರಿಯಡ್ಕ-ನಿಂತಿಕಲ್ಲು ರಸ್ತೆಗಳಲ್ಲಿ ಕಳಿದ ಹಲವಾರು ವರ್ಷಗಳ ಹಿಂದೆ ಡಾಂಬರೀಕರಣ ಮಾಡಲಾಗಿದ್ದು ಈಗ ಇದು ಹಾಳಾಗಿದ್ದು ರಸ್ತೆಗಳ ಎರಡು ಪಕ್ಕದ ದೊಡ್ಡ ಗುಂಡಿಗಳು ಬಿದ್ದು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಸದರಿ ರಸ್ತೆಗಳಿಗೆ ಮರು ಡಾಂಬರೀಕರಣ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ? ಇದ್ದಲ್ಲಿ ಯಾವಾಗ ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ. ಈ ಎರಡೂ ರಸ್ತೆಗಳನ್ನು ಗುಂಡಿ ಮುಚ್ಚಿ ಲಭ್ಯವಿರುವ ಅನುದಾನದಲ್ಲಿ ವಾಹನ ಸಂಚಾರಕ್ಕೆ ಯೋಗ್ಯವಾದ ಸ್ಥಿತಿಯಲ್ಲಿ ಇಡಲಾಗಿದೆ.

ಆ. ಜಾಲ್ಸೂರು ಸುಬ್ರಹ್ಮಣ್ಯ ರಸ್ತೆಯಲ್ಲಿ ಕಿಮೀ 7.00 ದಿಂದ ಕಿಮೀ 14.00 ವರೆಗೆ ಈಗಾಗಲೇ ಸುಧಾರಣೆ ಮಾಡಲಾಗಿದೆ. ಮುಂದುವರೆದು ನಿರ್ವಹಣೆ ಅನುದಾನದಲ್ಲಿಯ 0.87 ಕಿಮೀ ಮರು ಡಾಂಬರೀಕರಣ ಮಾಡಿದೆ. ಅರಿಯಡಕ-ನಿಂತಿಕಲ್ಲು ರಸ್ತೆಯಲ್ಲಿ ಕಿಮೀ 16.00 ದಿಂದ 23.60 ವರೆಗೆ ನಿರ್ವಹಣೆ ಅನುದಾನದಲ್ಲಿ ಸುಧಾರಣೆ ಕೆಲಸ ಪ್ರಗತಿಯಲ್ಲಿದೆ. ಮುಂದುವರಿದು 2000-01ರಲ್ಲಿ 0.60 ಕಿಮೀ ಮರುಡಾಂಬರೀಕರಣ ಮಾಡಿದೆ. ಈ ಎರಡು ಜಿಲ್ಲಾ ಮುಖ್ಯ ರಸ್ತೆಗಳ ಉಳಿದ ಭಾಗಗಳಿಗೆ ಕೂಡ ಮರು ಡಾಂಬರೀಕರಣ ಮಾಡುವ ಕುರಿತು ಪರಿಶೀಲಿಸಲಾಗುವುದು.

ಮುಳುಗು ಸೇತುವೆಯನ್ನು ಸರ್ವಋತು ಸೇತುವೆಯನ್ನಾಗಿ ಪರಿವರ್ತಿಸುವುದು

167(650) ಶ್ರೀ ಅಂಗಾರ ಎಸ್ (ಸೂಳ್ಯ) ಮಾನ್ಯಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಸುಬ್ರಹ್ಮಣ್ಯ-ಕೈಕಂಬ-ಗುಂಡ್ಯ ರಸ್ತೆಯ ಕುಮಾರಧಾರ ಎಂಬಲ್ಲಿ ಮುಳುಗು ಸೇತುವೆ ಇದ್ದು, ಸದರಿ ಸೇತುವೆಯನ್ನು ಸರ್ವಋತು ಸೇತುವೆಯನ್ನಾ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ? ಇದ್ದಲ್ಲಿ ಯಾವಾಗ ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ. ಈ ವಿಷಯದಲ್ಲಿ ಸದ್ಯಕ್ಕೆ ಯಾವುದೇ ಇಂತಹ ಖಚಿತ ಯೋಜನೆ ಇರುವುದಿಲ್ಲ. ಸೂಕ್ತ ಕಾಲಕ್ಕೆ ಈ ಯೋಜನೆ ಕುರಿತು ಪರಿಗಣಿಸಲಾಗುವುದು.